

# ಸಂಕಷ್ಟದ ವೇಳೆ ಹೊರಗೆ ಬಂದ ಮುಚ್ಚಿಟ್ಟ ವಿಳಾಸ

ಚಿದಾನಂದನ ಮರೆವೆ ಹಾಗೂ ಮಾನಸಿಕ ಚಂಚಲತೆ ಹೆಚ್ಚಾಗುತ್ತಲೇ ಹೋಯಿತು. ಔಷಧಿ ತೆಗೆದುಕೊಳ್ಳಲೂ ಅವನು ಹಿಂದೆಮುಂದೆ ನೋಡತೊಡಗಿದ. 'ವಿಷ ಹಾಕಿ ಕೊಲ್ಬೇಕು ಅಂತ ಮಾಡಿದೀರಾ? ನಾನ್ಯಾಕೆ ಮಾತ್ರೆ ನುಂಗ್ಲಿ? ನಂಗೇನಾಗಿದೆ?' ಎನ್ನುವ ಬೈಗುಳ ಕೇಳಿ ಕೇಳಿ ಶೀಲಾ ಆ ಉಸಾಬರಿಯನ್ನೇ ಬಿಟ್ಟು ಕೊಟ್ಟಿದ್ದಳು. ಬೆಳಿಗ್ಗೆ ಭಾರ್ಗವನ ಜೊತೆಯಲ್ಲೇ ಮಾವನಿಗೆ ತಿಂಡಿ ಕೊಟ್ಟು, ಅವನು ಅಪ್ಪನಿಗೆ ಮಾತ್ರೆ ನುಂಗಿಸುವ ಹರಸಾಹಸದ ಕೆಲಸ ಮಾಡಿ ಫ್ಯಾಕ್ಟರಿಗೆ ಹೊರಡುತ್ತಿದ್ದ. ರಾತ್ರಿ ಮತ್ತದೇ ಪುನರಾವರ್ತನೆ. ಅಪ್ಪ, ಮಗನ ಊಟ ಒಟ್ಟೊಟ್ಟಿಗೆ. ಮಾತ್ರೆ ನುಂಗಿಸಿ ಚಿದಾನಂದನನ್ನು ಹಾಸಿಗೆಗೆ ಸಾಗ ಹಾಕಿದರೆ ದೊಡ್ಡ ಯಜ್ಞ ಮಾಡಿ ಮುಗಿಸಿದ ಸಮಾಧಾನ. ಅವರೊಬ್ಬರನ್ನೇ ಎಲ್ಲೂ ಹೊರಗೆ ಕಳಿಸುವಂತಿರಲಿಲ್ಲ. ಶರ್ಟಿನ ಜೇಬಿಗೆ ಮನೆಯ ವಿಳಾಸದ ಚೀಟಿ ಹಾಕಿ ಕಳಿಸುವ ಏರ್ಪಾಟು ಯಾವತ್ತೋ ಕೊನೆಯಾಗಿತ್ತು.

'ಈ ದಾರಿ ಹೀಗೆ ಇರಲೇ ಇಲ್ಲ. ಮೈನ್ ರೋಡಿಗೆ ಹೋಗ್ಬೇಕಾದ್ರೆ ಆ ದಿಕ್ಕಿನಿಂದ ಹೋಗಿ ಸೇರ್ಕೊಬೇಕಾಗಿತ್ತು. ಬೆಳಗಾಗೋದ್ರೊಳಗೆ ಹೊಸ ಹೊಸ ಬಿಲ್ಡಿಂಗ್‌ಗಳು ಎದ್ದಿದಾವೆ...' ಎನ್ನುವ ಹಲವರಿಕೆ. ಅವರೊಬ್ಬರನ್ನೇ ಮನೆಯಲ್ಲಿ ಬಿಟ್ಟು ಎಲ್ಲಿಗಾದರೂ ಹೋಗಿ ಬರುವ ಧೈರ್ಯ ಮಾಡುವಂತಿರಲಿಲ್ಲ ಸೊಸೆ. ಬೀಗ ಹಾಕಿ ಬಿಟ್ಟು ಹೋದರೆ ಬಾಡಿಗೆ ಮನೆಯವರಿಗೆ ಗೊತ್ತಾಯಿತೆಂದರೆ ವೃಥಾ ಕೆಟ್ಟ ಮಾತು. ತೀರಾ ಅನಿವಾರ್ಯವಾದ ವ್ಯಾಪಾರವಾದರೆ ಮಗ ಸ್ಕೂಲಿನಿಂದ ಬಂದ ಮೇಲೆ ಅವನ ಜೊತೆ ಮಾವನನ್ನು ಬಿಟ್ಟು ಹೊರಗೆ ಹೋಗಿ ಬರುತ್ತಿದ್ದಳು ಶೀಲಾ. ಈ ವ್ಯವಸ್ಥೆಯನ್ನು ಗೌತಮ ಇಷ್ಟಪಡುತ್ತಿರಲಿಲ್ಲ.

'ತಡಿ, ನಿನ್ನ ಹೆಸರೇನು?' ಅನ್ನುವುದರಿಂದ ಶುರುವಾಗಿ, 'ಎಷ್ಟನೇ ಕ್ಲಾಸು ಓದ್ತಿದ್ದಿ?' ಅನ್ನುವವರೆಗೆ ಕೇಳಿದ್ದೇ ಕೇಳುವ ಅಜ್ಜ ಅವನಿಗೆ ರಗಳೆ ಹಿಡಿಸುತ್ತಿದ್ದರು. ಹೋಂವರ್ಕ್ ಮಾಡಬೇಕೆಂದರೆ ಅವನು ಕೋಣೆ ಸೇರಿ ಅಗುಳಿ ಹಾಕಿಕೊಳ್ಳಬೇಕಿತ್ತು. ಮಾಧ್ಯಮಿಕ ಶಾಲೆಗೆ ಈಗಷ್ಟೇ ಕಾಲಿಟ್ಟಿರುವ ಹುಡುಗ. ಚಿಕ್ಕಂದಿನಿಂದ ಎತ್ತಾಡಿಸಿದ ಅಜ್ಜನನ್ನು ಕಂಡರೆ ಪ್ರೀತಿ ಇದೆ. ಆದರೆ ಅವರಿಂದಾಗುವ ಕಿರಿಕಿರಿಯ ಕುರಿತು ಬೇಸರ, ವಿರೋಧಗಳೂ ಇವೆ.

'ನನ್ನ ಹತ್ರ ಮಾತಾಡ್ಬೇಡಿ ಅಜ್ಜಾ. ನೀವು ಏನು ಕೇಳಿದ್ರೂ ಉತ್ತರ ಕೊಡಲ್ಲ ನಾನು...' ಎಂದು ಖಡಕ್ಕಾಗಿ ಹೇಳಿಬಿಡುತ್ತಾನೆ ಗೌತಮ.

'ಎಲ್ಲಾ ಒಂದೇ ಪಾರ್ಟಿ' ಎನ್ನುವ ಚಿದಾನಂದನ ಅನಿಸಿಕೆಗೆ ಇದರಿಂದ ಮತ್ತಷ್ಟು ಪುಷ್ಟಿ ದೊರಕುತ್ತದೆಯೇ ಹೊರತು ತನ್ನಿಂದ ಯಾವ ಪ್ರಮಾದ ಅಥವಾ ತಪ್ಪು ಆಗುತ್ತದೆಯೆನ್ನುವುದರ ಕುರಿತು ಅವನಿಗೆ ಗೊತ್ತೇ ಆಗುವುದಿಲ್ಲ. ಮನೆಗೆ ಬಂದವರೆದುರು ಸೊಸೆ ಅವನಿಗೆ ಯಾವ ತಾಕೀತೂ ಮಾಡುವಂತಿಲ್ಲ ಅನ್ನುವ ಹೊಸ ವರಸೆ ಇತ್ತೀಚೆಗೆ ಅವನ ವರ್ತನೆಗೆ ಸೇರ್ಪಡೆಯಾಗಿದೆ. ಯಾರು ಯಾವ ಕಾರಣಕ್ಕಾದರೂ ಬಂದಿರಲಿ, ತಾನೇ ಮಾತಾಡಬೇಕು. ತಾನೇ ಯಜಮಾನಿಕೆ ವಹಿಸಬೇಕು. ಮಾತು ಅಂದರೆ ಏನು? ಕೇಳಿದ್ದೇ ಕೇಳುತ್ತಿರುವುದು.

'ಮಾವ, ನೀವು ಒಳಗೆ ಹೋಗಿ ಮಲಗಿ. ಮಾತಾಡಿದ್ದು ಸಾಕು' ಎಂದು ಶೀಲಾ ಹೇಳಿದರೆ ಎದುರಿಗೆ ಯಾರಿದ್ದಾರೆ ಎನ್ನುವ ಮುಲಾಜು ಇಲ್ಲದೆ ದನಿ ಏರಿಸುತ್ತಾನೆ ಚಿದಾನಂದ.

'ಮಲಗ್ಬೇಕು ಅನ್ನಿಸಿದ್ರೆ ಮಲಗ್ತೀನಿ. ನೀನು ಆರ್ಡರ್ ಮಾಡೋದು ಬೇಡ. ನಾನಿಲ್ಲಿರೋದು ಇಷ್ಟ ಆಗಲ್ಲ ಅಂದ್ರೆ ನೇರವಾಗಿ ಎದ್ಹೋಗು ಅಂತ ಹೇಳು. ನಾಟಕ ಮಾಡ್ಬೇಡ'.

'ಹಾಗಲ್ಲ ಮಾವ, ಹಾಗಲ್ಲ ಮಾವ...'

'ಹೋಗ್ಲಿ ಬಿಡಿ, ವಯಸ್ಸಾದೋರು' ಬಂದವರೇ ಸಂತೈಕೆಯ ಮಾತಾಡಬೇಕಾದ ಪರಿಸ್ಥಿತಿ.

ಎಲ್ಲಕ್ಕಿಂತ ಮಿಗಿಲಾಗಿ ಶೀಲಾಳಿಗೆ ಬಿಸಿತುಪ್ಪ ಆಗಿರುವಂತಹ ಸಂಗತಿ ಅಂದರೆ ಹೊರಗೆಲ್ಲಾದರೂ ಮದುವೆ, ಮುಂಜಿ, ಸತ್ಯನಾರಾಯಣ, ನಾಮಕರಣದಂಥ ಕಾರ್ಯಕ್ರಮಗಳಿಗೆ ಹೋಗಬೇಕಾದ ಪ್ರಸಂಗ. ಅವಳು ಸ್ವಭಾವತಃ ಅಲಂಕಾರ ಪ್ರಿಯೆ. ಭೋಜನ ಪ್ರಿಯೆ. ಇಷ್ಟಮಿತ್ರ, ಬಂಧುಬಾಂಧವರು ಒಗ್ಗೂಡುವ ಸಮಾರಂಭಗಳಲ್ಲಿ ಭಾಗವಹಿಸುವುದೆಂದರೆ ಅವಳಿಗೆ ವಿಶೇಷದ ಒಲವು. ಉಟ್ಟು, ತೊಟ್ಟು, ಅಲಂಕರಿಸಿಕೊಂಡು